ಯನ್ನು ಪಡೆದು ವರದಿಗೆ ರುಜು ಹಾಕಬೇಕು ಎಂದು ಹೇಳಿ ಈ ಸದನಗಳ ಸದಸ್ಯರ ಮಟ್ಟವನ್ನು ಇಳಿಸಿದ್ದಾರೆ. ಈ ರೀತಿ ಸದಾ ಸೇವಾಕಾಂಕ್ಷಿಯಾಗಿರತಕ್ಕ ಪೆರುಮಾಳ್ ಅವರು ಮಾಡಿದ್ದಾರೆಂದರೆ ನಿಜವಾಗಿ ಕೂಡ ಗಂಭೀರವಾಗಿ ಇದನ್ನು ನೋಡಬೇಕು. ಮಾನ್ಯ ಚನ್ನಬಸಪ್ಪನವರು ಇದನ್ನು ಬಹಳ ಲಘುವಾಗಿ ಕಾಣಬಾರದು ತಾವು ತಮ್ಮ ನಾಯಕರಿಗೆ (ಬುದ್ಧಿ ಅವರಿಗೆ) ಹೇಳಬೇಕು ತಾವು ಮಾತಿನಂತೆ ಕೆಲಸ ಮಾಡಿಸಿಕ್ಕಾದಂದಲ್ಲ, ಆ ರೀತಿ ಮಾಡುವುದನ್ನು ಕೈಬಿಟ್ಟು ಈ ಸದನಕ್ಕೆ ಅಪಾಲಜಿ ಕೇಳಬೇಕು ಎಂದು.

ಅಧ್ಯಕ್ಷರು.—ನಾಯಕರನ್ನು ಕೇಳದೆ ಯಾವ ರೂಲಿಂಗೂ ಕೊಡುವುದಕ್ಕೆ ಬರುವುದಿಲ್ಲ. ಶ್ರೀ ಮಾನ್ ಪೆರುಮಾಳ್ ಅವರು ಆ ಮನೆಯ ಸದಸ್ಯರಾಗಿರುವುದರಿಂದ ಅವರ ಮೇಲೆ ಯಾವ ತರಹದ ಕ್ರಮವನ್ನೂ ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾಯಕರಿಂದ ಎಲ್ಲ ವಿಷಯವನ್ನೂ ಕೇಳಿಯಾದ ಮೇಲೆ ನಾಳೆ ದಿವಸ ರೂಲಿಂಗ್ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎರಡು ಪ್ರಶ್ನೆ ಇದರಿಂದ ಉದ್ಭವವಾಗುತ್ತದೆ. ಪೆರುಮಾಳ್ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆಯೇ ಇಲ್ಲವೇ ಎಂಬುದು ಮತ್ತು whether his conduct amounts to obstruction ಅನ್ನುವುದನ್ನೂ ನೋಡಬೇಕು,

Sri H. D. Devegowda.—Has the privilege of this House been affected by this ?

Madam Speaker.—I will examine that also.

Notice of an adjournment Motion

Re : Clases in Chintamani on 5th June 1977.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೆ, ಚಿಂತಾಮಣಿಯಲ್ಲಿ ನಡೆದಂಥ ಗಲಭೆ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮ್ಮ ಕಾರ್ಯಾಲಯಕ್ಕೆ ಕಳಿಹಿಸಿಕೊಟ್ಟಿದ್ದೇನೆ. ನಿನ್ನೆ ದಿವಸ ಆ ವಿಷಯ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಆದ್ದರಿಂದ ಆ ಬಗ್ಗೆ ಚರ್ಚೆಗೆ ಅವಕಾಶವನ್ನು ದಯಮಾಡಿ ಈ ದಿವಸ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ತಿಂಗಳು ಐದನೇ ತಾರೀಖು ಭಾನುವಾರ ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ಚಿಂತಾಮಣಿ ಟೌನಿನಲ್ಲಿ ಶ್ರೀನಿವಾಸ ಎಂಬ ಒಬ್ಬ ರಾಜಕೀಯ ಕಾರ್ಯಕರ್ತ ಅಥವಾ ಒಬ್ಬ ನಾಗರೀಕ ಒಂದು ಮಿಲ್ಕ್ ಸೊಸೈಟಿಯ ಮುಂಭಾಗದಲ್ಲಿ ದ್ದಾಗ ಕೆಲವು ವ್ಯಕ್ತಿಗಳು ಸೇರಿ ಅವನನ್ನು ಥಳಿಸಲಕ್ಕೆ ಪ್ರಯತ್ನ ಮಾಡಿದಾಗ ರಕ್ಷಣೆ ಪಡೆಯುವುದಕ್ಕಾಗಿ ಪೋಲೀಸ್ ಠಾಣೆಗೆ ಓಡಿಹೋಗಿದ್ದಾನೆ. ಓಡಿಹೋದಾಗ ಅವನ ಹಿಂದುಗಡೆ ನುಮಾರು ನೂರಾರು ಜನರ ಗುಂಪು ಈ ಸದನದ ಸದಸ್ಯರಾದ ಚೌಡಾರೆಡ್ಡಿಯವರ ಮುಖಂಡತ್ವದಲ್ಲಿ ಅಟ್ಟಿಸಿಕೊಂಡು ಹೋಗಿ ಪೋಲೀಸ್ ಠಾಣೆಯಲ್ಲಿದ್ದಂಥ ಅಧಿಕಾರಿಗಳಿಗೆ ಬೆದರಿಕೆ ಹಾಕಿ ಅವನನ್ನು ನಮಗೆ ಒಪ್ಪಿಸಿ, ಅವನಿಗೆ ನಾವು ಶಿಕ್ಷೆ ಮಾಡಬೇಕು ಎಂದು ಹೇಳಿದಾಗ ಅವರು ಅದಕ್ಕೆ ಪ್ರತಿಭಟನೆ ಮಾಡಿದಾಗ ಪೋಲೀಸ್ ಅಧಿಕಾರಿಗಳಿಗೆ ಈ ಗುಂಪಿನವರು ಹೊಡೆಯುತ್ತಾರೆ ಪೋಲೀಸ್ ಅಧಿಕಾರಿಗಳು ಏಟು ತಿನ್ನಬೇಕಾದ ಪರಿಸ್ಥಿತಿ ಬಂದಿದೆ. ಅವರು ಪ್ರಾಣ ರಕ್ಷಣೆ ಮಾಡಿಕೊಳ್ಳುವುದಕ್ಕೋಸ್ಕರ ವಾಗಿ ನೀವು ಈ ರೀತಿ ದಾಂದಲೆ ಮಾಡುವುದಾದರೆ ನಾವು ಫೈರಿಂಗ್ ಓಪನ್ ಮಾಡಬೇಕಾಗುತ್ತದೆ ಎಂದು ಹೇಳಿ ಬೆದರಿಕೆ ಹಾಕಿ ವಾಪಸ್ ಕಳುಹಿಸಿದ್ದಾರೆ.

ಕಳೆದ 2ನೇ ತಿಂಗಳಲ್ಲಿ ನಡೆದ ವಿಧಾನ ಪರಿಷತ್ತಿನ ಚುನಾವಣಾ ಸಂಬಂಧದಲ್ಲಿ 8 ಜನ ಮುನಿಸಿಪಲ್ ಕೌನ್ಸಿಲರುಗಳು ಅವರ ಪಾರ್ಟಿಯನ್ನು ಬಿಟ್ಟು ಜನತಾ ಪಾರ್ಟಿಗೆ ಸೇರಿದರು. ಗುಂಪು ಬರುವಾಗ ಲಕ್ಷ್ಮಯ್ಯ ಎಂಬ ವ್ಯಕ್ತಿ ಇಟ್ಟುಕೊಂಡಿರುವ ಶರಾಬು ಅಂಗಡಿಗೆ ನುಗ್ಗಿ ಶರಾಬು ಬಾಟಲುಗಳನ್ನು ಹೊಡೆದು ಲೂಟ್ಸಾನು ಮಾಡಿ, ಏಟು ಹೊಡೆದು ನಂತರ ಪಕ್ಕದಲ್ಲಿ ಸಿನಿಮಾ ಥಿಯೇಟರ್ ಕಡೆ ಬರುತ್ತಾರೆ. ಸಿನಿಮಾ ಥೇಟರ್ ಮಾಲೀಕ ಜನತಾ ಪಕ್ಷಕ್ಕೆ ಸೇರಿದ್ದಾರೆ. ಆ

ಥಿಯೇಟರ್ ಮೇಲೆ ದಾಳಿ ಮಾಡಿ, ಅದರ ಗಾಜು ಹೊಡೆದು ಸಾಕಷ್ಟು ನಷ್ಟ ಮಾಡಿ ಅಲ್ಲಿಂದ ಮುಂದೆ ನಾರಾಯಣರೆಡ್ಡಿ ಎಂಬ ಅಡ್ವೋಕೇಟ್ ಹತ್ತಿರ ಬರುತ್ತಾರೆ. ಅವನು ಇವರ ದಿವಂಗತ ತಂದೆಯವರ ಹಿಂಬಾಲಕನಾಗಿ ಮತ್ತು ಇವರ ಹಿಂಬಾಲಕನಾಗಿ ಕೆಲಸ ಮಾಡಿದ್ದಾನೆ. ಆತನು ಮನೆಯಲ್ಲಿದ್ದಾಗ ಅವನ ಮನೆಗೆ ನುಗ್ಗಿ ಅವನನ್ನು ಥಳಿಸುತ್ತಾರೆ. ಆಗ ಆತನು ಪ್ರಾಣವನ್ನು ಉಳಿಸಿಕೊಳ್ಳಲು ಒಳಗೆ ಹೋಗಿ ಬಾಗಿಲನ್ನು ಹಾಕಿಕೊಂಡರೂ ಬಾಗಿಲನ್ನು ಒಡೆಯುತ್ತಾರೆ, ಪುನಃ ಅವನು ಬಚ್ಚಲು ಮನೆಗೆ ಓಡಿ ಹೋಗುತ್ತಾನೆ. ಅವನನ್ನು ಅಲ್ಲಿಯೂ ಸಹ ಬಿಡದೆ ಥಳಿಸುತ್ತಾರೆ ಮತ್ತು ಮನೆಯ ಸಾಮಾನುಗಳನ್ನು ಒಡೆಯು ಹಾಕುತ್ತಾರೆ. ಅಷ್ಟರಲ್ಲಿ ಪೋಲೀಸರು ಬರುತ್ತಾರೆ, ಅವನ ಪ್ರಾಣ ಉಳಿಯುತ್ತದೆ. ನಾನು ಈ ವಿಚಾರವನ್ನು ಪತ್ರಿಕೆಯಲ್ಲಿ ಓದಿದ್ದೇನೆ.

ಅಧ್ಯಕ್ಷರು.—ಅನುಮತಿ ಕೇಳುವವರು ಹೀಗೆ ಮಾತನಾಡಿದರೆ ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.—ಅನುಮತಿ ಕೊಡುವುದಾದರೆ ಕುಳಿತುಕೊಳ್ಳುತ್ತೇನೆ. ಅನುಮತಿ ಕೊಡಬೇಕಾದರೆ ವಿವರವಾಗಿ ಹೇಳಬೇಕಲ್ಲ. ಇನ್‌ಸ್ಪೆಕ್ಟರ್ ನಟರಾಜ್‌ರವರ ಎದೆಗೂ ಮತ್ತು ಸಬ್ ಇನ್‌ಸ್ಪೆಕ್ಟರ್‌ರವರ ಬಲಗಾಲಿಗು ಭಾರಿ ಪೆಟ್ಟು ಬಿದ್ದಿದೆ.

SRI A. A. DESAI.—Before giving the consent, it may be consider what he is saying what he has to say after the motion is admitted.

MADAM SPEAKER.—How can I admit without knowing the things ?

SRI A. A. DESAI.—He has already stated what he wants to say.

ಶ್ರೀ ಹೆಚ್. ಡಿ. ದೇವೇಗೌಡ.—ಅಷ್ಟೇ ಅಲ್ಲ. ನಾರಾಯಣ ರೆಡ್ಡಿಯನ್ನು ಓಡಿಸಿಕೊಂಡು ಹೋಗಿ ಅವನ ಮನೆಯ ಮಕ್ಕಳು ಮರಿಗಳಿಗು ಸಹ ಹೊಡೆದಿದ್ದಾರೆ. ನಾವು ನೋಡಿಕೊಳ್ಳುತ್ತೇವೆ, ಅವನನ್ನು ಕೊಂದು ಹಾಕಿರಿ ಎಂದು ಹೇಳಿದ್ದು ಉಂಟು. ಮಾನ್ಯ ಅಧ್ಯಕ್ಷೆಯವರೆ, ಈ ಘಟನೆ ನಡೆದ 2 ದಿನಗಳವರೆಗೆ ಯಾರನ್ನೂ ಮಾತನಾಡಿಸಲಿಲ್ಲ. 48 ಗಂಟೆಗಳ ಕಾಲ ಯಾವ ಬಗ್ಗೆಯು ಕ್ರಮ ತೆಗೆದುಕೊಂಡಿಲ್ಲ. ಕೇಸನ್ನು ಸ್ಥಳೀಯ ಅಧಿಕಾರಿಗಳು ರಿಜಿಸ್ಟರ್ ಮಾಡಿದರೂ ಕೂಡ ವಿಚಾರಣೆ ಮಾಡುವುದಾಗಲೀ, ಬಂಧನ ಮಾಡುವುದಾಗಲೀ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಆದಾದಮೇಲೆ ಪಾಪ, ಸರ್ಕಾರದವರು ಹೇಳುತ್ತಾರೆ, ನಾವು ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದಕ್ಕೆ ತಯಾರಾಗಿಲ್ಲ, ನಿಷ್ಪಕ್ಷಪಾತವಾದ ತನಿಖೆಯನ್ನು ನಡೆಸುವುದಕ್ಕೆ ಹೆಸರಾದಂತಹ ವ್ಯಕ್ತಿಗಳು ಎಂದು. ಇವರ ಭಾಷಣಕ್ಕೆ ಬೆಂಕಿ ಹಾಕಿತು, and they will issue instructions to arrest such of those people who have not at all connected with this incident.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಏನೋ ಗಣಪತಿ ಮಾಡಿ ಎಂದರೆ ಗಣಪತಿ ಅಪ್ಪನನ್ನು ಮಾಡುತ್ತೇವೆ ಎನ್ನುತ್ತೀರಿ. You have to say how it is a definite matter of public importance:

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಚನ್ನಬಸಪ್ಪನವರ ಮನೆಗೆ 25 ಜನರನ್ನು ಕಳುಹಿಸಿ ಒದೆಸಿದರೆ ಅದು ಹೇಗೆ ಎಂಬುದು ಗೊತ್ತಾಗುತ್ತದೆ.

SRI H M. CHANNABASAPPA.—The hon.ble Member may speak to the chair. why is he angry with me ?

SRI H. D. DEVE GOWDA.—I quoted several times about the way in which the police machinery has been used by the Ruling Party to suppress us and the Government gave a categorical assurance about the proper use of police machinery. Is it the way to take steps to give protection to the citizens ?

ಶ್ರೀ ಟಿ. ಎಂ. ಮಂಜುನಾಥ್.—ಪೋಲೀಸರ ವಿಧಿನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಇವರ ಮುಕ್ಕಳಿಗೆ ಹೊಡೆದಿದ್ದರೆ ಗೊತ್ತಾಗುತ್ತಿತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಒದೆಸಿಕೊಂಡಿರುವವರಿಗೆ ಕಷ್ಟ ಗೊತ್ತಾಗುತ್ತದೆಯೇ ವಿನಹ ಇವರಿಗೆ ಹೇಗೆ ಆ ಕಷ್ಟ ಗೊತ್ತಾಗಬೇಕು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಿಮಗೆ ಹೇಗೆ ಗೊತ್ತಾಯಿತು ?

ಶ್ರೀ ಟಿ. ಎಂ. ಮಂಜುನಾಥ್.—ನಮಗೆ ಮೊನ್ನೆ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಹೃದಯದ ತೊಂದರೆಯಾಗಿದೆ ಎಂದು ಹೇಗೆ ಪತ್ರಿಕೆಯು ಮೂಲಕ ತಿಳಿಯಿತೋ ಅದೇ ರೀತಿ ಈ ವಿಚಾರವೂ ತಿಳಿಯಿತು.

ಶ್ರೀ ಹೆಚ್. ಡಿ. ದೇವೇಗೌಡ.—ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಸಬ್ ಇನ್‌ಸ್ಪೆಕ್ಟರುಗಳು ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಅವರು ಈ ಸನ್ನಿವೇಶದಲ್ಲಿ ಚಾಕಚಕ್ಯತೆಯಿಂದ ಕೆಲಸ ಮಾಡದಿದ್ದರೆ ನಾರಾಯಣರೆಡ್ಡಿಯವರ ಮನೆ ಸುಟ್ಟು ಹೋಗುತ್ತಿತ್ತು. ಆದಾದಮೇಲೆ ನಿಮ್ಮ ಇಂಟರ್‌ಫೀಯರೆನ್ಸ್, ಯಾವನೋ ಒಬ್ಬ ಏಟು ತಿಂದು ಸತ್ತಿದ್ದಾನೆ ಎಂದು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅದನ್ನೆಲ್ಲ ವಿವರವಾಗಿ ಚರ್ಚೆ ಮಾಡಲು ಅಧ್ಯಕ್ಷರ್ ಅನುಮತಿಕೊಟ್ಟರೆ ಮಾಡಿ, ಅದಕ್ಕೆ ನನ್ನದೇನು ಅಡ್ಡಿಯಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅನುಮತಿ ಕೊಡುವುದಕ್ಕೆ ಕನ್‌ವಿನ್ಸ್ ಮಾಡಬೇಕೊ ಬೇಡವೋ ?

ಶ್ರೀ ಹೆಚ್. ಡಿ. ದೇವೇಗೌಡ.—ಇವತ್ತು ನಾನು ಈ ಘಟನೆಯನ್ನು ಯಾವುದೇ ರಾಜಕೀಯ ದೃಷ್ಟಿಯಿಂದಲೂ ಮಾತನಾಡುತ್ತಿಲ್ಲ. ನೀವು ಅಧಿಕಾರದಲ್ಲಿರುವವರಿಗೆ, ಇವತ್ತು ರಾಜ್ಯದಲ್ಲಿ 3 ಕೋಟಿ ಜನರೇನಿದ್ದಾರೆ ಅವರೆಲ್ಲರ ರಕ್ಷಣೆ ಮಾಡತಕ್ಕ ಹೊಣೆಗಾರಿಕೆಯನ್ನು ಹೊತ್ತು ಕೆಲಸ ಮಾಡಬೇಕಾಗಿದೆ., ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಈ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯು ಚರ್ಚೆಯಲ್ಲಿ ಭಾಗವಹಿಸಿರಬಹುದು. ಮಾನ್ಯ ಅಧ್ಯಕ್ಷೆಣಿಯವರೇ, ಇವತ್ತು ನನ್ನ ಮನಸ್ಸಿಗೆ ಬಹಳ ವ್ಯಥೆಯಾಗಿ ಹೇಳುತ್ತಿದ್ದೇನೆ; ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಪೋಲೀಸ್ ಇಲಾಖೆ ರಾಜ್ಯಕ್ಕೆ ಅಧೀನವಾಗಿದೆಯೇ ಅಥವಾ ರಾಜ್ಯದ ಜನತೆಗೆ ಅಧೀನವಾಗಿದೆಯೇ, ಅಥವಾ ಪಕ್ಷಕ್ಕೆ ಅಧೀನವಾಗಿದೆಯೇ, ಅಥವಾ ಕಾರ್ಯಕರ್ತರಿಗೆ ಅಧೀನವಾಗಿದೆಯೇ ಎಂಬ ಬಗ್ಗೆ ಇತ್ಯರ್ಥವಾಗಬೇಕು.

SRI H. M. CHANNABASAPPA.—I want to know whether he is making out a case for the adjournment motion or giving a lecture on what has happened. He is giving a picture of what according to him had taken place from A to Z and not making out a case for the adjournment.

ಶ್ರೀ ಹೆಚ್. ಡಿ. ದೇವೇಗೌಡ.—ನಿನ್ನೆ ನಿಮ್ಮ ಸರ್ಕಾರದ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಅದು ಪತ್ರಿಕೆಯಲ್ಲಿ ಬಂದಿದೆ. ಆ ಉತ್ತರವನ್ನು ಪುನಃ ಇಂದು ಇಲ್ಲಿ ಹೇಳುತ್ತಿದ್ದೀರಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇಲ್ಲ ಎಂದು ಯಾರು ಹೇಳಿದರು ?

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಹೋಗಿ ಒದೆ ತಿಂದಿದ್ದರೆ ಗೊತ್ತಾಗುತ್ತಿತ್ತು. ಈಗ ನನ್ನನ್ನೇ ಪ್ರಶ್ನೆ ಕೇಳುತ್ತಿದ್ದೀರಿ.

SRI H. M. CHANNABASAPPA.—Have you received blows ?

SRI H. D. DEVE GOWDA.—I only go on the basis of the press reports and you rely on the report given by the officers.

SRI H. M. CHANNABASAPPA.—You go by press reports and I go by my Police

SRI H. D. DEVE GOWDA.—In fact several people from this place went and studied the situati n. ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಬಗ್ಗೆ ನನ್ನ ಮನಸ್ಸಿಗೆ ಬಹಳ ದುಃಖವಾಗಿದೆ;

ಅಧ್ಯಕ್ಷರು.—ದುಃಖವಾಗಿರಬಹುದು, ಆದರೆ ಹೀಗೆಲ್ಲ ಮಾತನಾಡಬಾರದು'

ಶ್ರೀ ಹೆಚ್. ಡಿ. ದೇವೇಗೌಡ.—ನೀವು ನ್ಯಾಯದ ತಕ್ಕಡಿ ಹಿಡಿದು ತೀರ್ಮಾನ ಮಾಡ ಬೇಕಾಗುತ್ತದೆ ಅಲ್ಲಿ ಸಾವಿರಾರು ರೂಪಾಯಿಗಳು ನಷ್ಟವಾಗಿರುವುದನ್ನು ಪತ್ರಿಕಾ ಕರ್ತರು ನೋಡಿದ್ದಾರೆ, ಮತ್ತು ಆ ವಿಚಾರ ಎಲ್ಲ ಪತ್ರಿಕೆಗಳಲ್ಲಿಯು ವರದಿಯಾಗಿದೆ.

SRI H. M. CHANNABASAPPA.—I have no objection if you speak for hours about all the details once permission is given..

ಶ್ರೀ ಹೆಚ್. ಡಿ. ದೇವೇಗೌಡ.—ಪೋಲೀಸ್ ಅಧಿಕಾರಿ ಅಲ್ಲಿಗೆ ಬಂದು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ.

ಅಧ್ಯಕ್ಷರು.—ಎಲ್ಲರೂ ಅದನ್ನು ಓದಿದ್ದಾರೆ. ತಾವು ಹೇಳುವುದನ್ನೆಲ್ಲಾ ಹೇಳಿ ಆಗಿದೆ. ಸರ್ಕಾರದವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಹೆಚ್. ಡಿ. ದೇವೇಗೌಡ.—ಪತ್ರಿಕೆಯಲ್ಲಿ ಇದು ವರದಿಯಾದ ಮೇಲೆ ಅವರು ಇನ್ನೂ ಮುಂದೆ ಹೋಗಿದ್ದಾರೆ. ಯಾರು ಈ ಒಂದು ಘಟನೆಗೆ ಸಂಬಂಧವಿಲ್ಲವೋ ಮತ್ತು ಘಟನೆಯಲ್ಲಿ ಪೆಟ್ಟು ತಿಂದಿದ್ದಾರೋ ಅಂಥವರ ಮೇಲೆ ಮೊಕದ್ದಮೆಯನ್ನು ಹಾಕಿದ್ದಾರೆ : ಪ್ರಾಸಿಕೂಟ್ ಮಾಡಿ ದ್ದಾರೆ ಮತ್ತು ಅರೆಸ್ಟ್ ಮಾಡಿದ್ದಾರೆ. ಒಬ್ಬ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಿಗೂ, ಈ ಘಟನೆಗೂ ಸಂಬಂಧ ಇಲ್ಲ. ಅವರು ಪ್ರಾಮಾಣಿಕರಾದವರು ಅವರನ್ನೂ ಕೂಡ ಅರೆಸ್ಟ್ ಮಾಡಿದ್ದಾರೆ. ಇಷ್ಟು ದೂರ ಇವತ್ತು ನಮ್ಮ ಪೋಲೀಸ್ ಯಂತ್ರವನ್ನು ಉಪಯೋಗ ಮಾಡಿ ವಿರೋಧಪಕ್ಷವನ್ನು ತುಳಿಯಬೇಕು ಎಂದು ಹೊರಟಿದ್ದಾರೆ. ನಮ್ಮ ತಾಳ್ಮೆಗೂ ಒಂದು ಮಿತಿ ಇದೆ. ತಾಳ್ಮೆ ಮಿತಿ ಮೀರಿದಾಗ ನಾವೂ ಬೀದಿಯಲ್ಲಿ ನಿಲ್ಲಬೇಕಾಗುತ್ತದೆ ನಾವು ಸಾಯಬಹುದು ಆದರೆ ಒಬ್ಬಿಬ್ಬರನ್ನು ತೆಗೆದು ಸಾಯುತ್ತೇವೆ. ಈ ದೃಷ್ಟಿಯಿಂದ ಕೇವಲ 15 ದಿವಸಗಳಲ್ಲಿ ರಾಜ್ಯದಲ್ಲಿ ಇದರ ಪರಿ ಣಾಮ ಬೇರೆಯಾಗುತ್ತದೆ. I am going to give an open call I want a categorical assurance from the Government that the Government take strong steps irrespective of party feelings to put down these things.

SRI H. M. CHANNABASAPPA.—Hon. Member may please establish the matter of public importance worth being considered to the Hon. Speaker to give him permission.

ಅಧ್ಯಕ್ಷರು.—ಅನುಮತಿ ಕೊಟ್ಟಮೇಲೆ ಎಷ್ಟು ಬೇಕಾದರೂ ಅವರು ಮಾತನಾಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೋಸ್ಕರ ನಾವು ಯಾರಿಗಾದರೂ ಗುದ್ದಿ ಹೇಳಬೇಕೇ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಗುದ್ದಬಹುದು:

ಶ್ರೀ ಹೆಚ್. ಡಿ. ದೇವೇಗೌಡ.—ತಾವುಗಳು ಸದಾ ಮಂತ್ರಿಗಳು ಆಗಿ, ಇದರ ಮೂಲಕ ತಮಗೆ ಸದಾ ರಕ್ಷಣೆ ಸಿಕ್ಕುತ್ತದೆ ಎನ್ನುವ ಇಂಗಿತವನ್ನು ಮರೆಯಿರಿ. ಇವತ್ತು ತಾವು ಸದಾ ಆ ಸ್ಥಾನದಲ್ಲಿರುತ್ತೇವೆ ಎನ್ನುವ ಅಹಂಭಾವವನ್ನು ಮರೆಯಬೇಕು

SRI H. M. CHANNABASAPPA —I am sorry, Hon. Member is going on saying too much.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮ ಅರ್ಥದಲ್ಲಿ ಪಬ್ಲಿಕ್ ಇಂಪಾರ್ಟೆನ್ಸ್ ಎಂದರೆ ಏನು ಹೇಳಬೇಕು ? ಶಾಶ್ವತವಾಗಿ ಸರ್ವಾಧಿಕಾರವನ್ನು ಉಳಿದುಕೊಳ್ಳುತ್ತೇವೆ ಏನು ಬೇಕಾದರೂ ಮಾಡ ಬಹುದು ಎಂದು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಟಿ. ಪುಟ್ಟಸ್ವಾಮಯ್ಯ.—ನಂಜಯ ಗಾಂಧಿಯವರಿಗೆ ಮೆರವಣಿಗೆ ಮಾಡಿದ್ದೀರಿ, ಈಗ ಅವರ ಗತಿ ಏನಾಗಿದೆ, ಅದಕ್ಕೂ ಹೆಚ್ಚಿನದು ನಿಮಗೆ ಆಗುತ್ತದೆ.

SRI H. D. DEVE GOWDA.—A former Chief Minister is now facing enquiry.

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಬೆಳಿಗ್ಗೆ ಪ್ರಶ್ನೋತ್ತರ ವೇಳೆಯಲ್ಲಿ ಸಂಬಂಧಪಟ್ಟ ಸನ್ನಿವೇಶವನ್ನು ತಮ್ಮ ಗಮನಕ್ಕೆ ತಂದಿದ್ದಾರೆ ಬರೀ ಶಾಸಕರ ಬೆಂಬಲ ಪಡೆಯಬೇಕು. ಆ ರೀತಿಯಾಗಿ ಪಡೆದು ಮಂತ್ರಿ ಸ್ಥಾನದಲ್ಲಿ ಕೂಡಬೇಕು ಎಂದು ತಿಳಿದುಕೊಂಡಿದ್ದೀರಿ, ಸಹನಾ ಶಕ್ತಿ ನಮಗೆ ಬಹಳ ಹೆಚ್ಚು. ಇವತ್ತು ಮಾನ್ಯ ಅಧ್ಯಕ್ಷಣೆಯವರು ನಮ್ಮ ನಿಲುವಳಿ ಸೂಚನೆಗೆ ಅನುಮತಿ ಕೊಡಲಿ ಅಥವಾ ನಿರಾಕರಿಸಲಿ ಅದನ್ನು ಅವರಿಗೆ ಬಿಡುತ್ತೇನೆ, ಆದರೆ ಈ ಒಂದು ಪ್ರಕರಣದಲ್ಲಿ ನಾವು ಹೇಳುವುದು ಸತ್ಯ ನೀವು ಹೇಳುವುದು ಸತ್ಯ ಎನ್ನುವುದಕ್ಕೆ ಬೇರೆಯವರನ್ನು ಕಳುಹಿಸಿ ನೋಡ ಬಹುದಲ್ಲವೇ ? I could see from the reply of the Government in the other House. Based on that I am charging. ಇವತ್ತು ಎಲ್ಲಾ ಪತ್ರಿಕೆಗಳಲ್ಲಿಯೂ ಇದು ಬಂದಿದೆ, ಈ ಒಂದು ಪ್ರಕರಣದಲ್ಲಿ ಶಾಸಕರು ಇನ್‌ವಾಲ್ವ್ ಆಗಿದ್ದಾರೆ ಮತ್ತು ಇವರ ಮುಖಂಡತ್ವದಲ್ಲಿ ಈ ಒಂದು ಘಟನೆ ನಡೆದಿರುವುದರಿಂದ ಇದು ನಿಷ್ಪಕ್ಷಪಾತವಾಗಿ ವಿಚಾರಣೆಯಾಗ ಬೇಕು, ದಯಮಾಡಿ ಈ ಒಂದು ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಟಿ ಕೃಷ್ಣಪ್ಪ.—ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ, ಮಾನ್ಯ ದೇವೇಗೌಡರು ಎತ್ತಿರತಕ್ಕ ನಿಲುವಳಿ ಸೂಚನೆ, ನಿಲುವಳಿಸೂಚನೆಯಾಗಬಲ್ಲುದೆ ಎನ್ನತಕ್ಕದ್ದಕ್ಕೆ ಅವರು ಸಮರ್ಥನೆ ಏನೋ ಮಾಡಿದ್ದಾರೆ. ಈ ಸಮಯದಲ್ಲಿ ಅವರು ವಿಷಯಗಳನ್ನು ಅಮೂರಾಗ್ರವಾಗಿ ಭಾಷಣದ ರೂಪದಲ್ಲಿ ಹೇಳಿರುವುದರಿಂದ ಇದರ ಸತ್ಯಾಸತ್ಯತೆಯನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಅವರ ಭಾಷಣ ಚರ್ಚಾ ರೂಪವನ್ನು ತಳೆಯುತ್ತದೆ. ಅದಕ್ಕೆ ಅವಕಾಶ ಕೊಡದ ಹಾಗೆ ಹೇಗೆ ಇದು ನಿಲುವಳಿ ಸೂಚನೆಯಾಗಬಲ್ಲುದು ಎನ್ನುವುದಕ್ಕೆ ಮಾತ್ರ ಅವರ ಮಾತು ಗಳನ್ನು ಸೀಮಿತವಾಗಿ ಹೇಳಿದರೆ ಒಳ್ಳೆಯದು ಎಂದು ಕಾಣುತ್ತದೆ. ಈ ವಿಷಯದಲ್ಲಿ ಲಂಬಿಸಿ ಮಾತನಾಡುವುದು ಸರಿಯಲ್ಲ.

(ಸಭೆಯಲ್ಲಿ ನಾಲ್ಕಾರು ಜನ ಸದಸ್ಯರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು.—ಪ್ರತಿ ಸಾರಿಗೂ ಮಾನ್ಯ ಸದಸ್ಯರುಗಳು ಎದ್ದು ಮಾತನಾಡುವುದು ಸರಿಯಲ್ಲ. Unless I call, Hon. Members should not get up.

ಶ್ರೀ ಎಚ್. ಟಿ ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಪದೇ ಪದೇ ಮಾನ್ಯ ಸದಸ್ಯರುಗಳಿಗೆ ಹೇಳುತ್ತಿದ್ದರೂ, ಎಷ್ಟರಮಟ್ಟಿಗೆ ಅವರುಗಳು ಹೇಳುವ ವಿಷಯ ನಿಲುವಳಿ ಸೂಚನೆಯಾಗಬಲ್ಲುದು ಎನ್ನುವುದರ ಬಗ್ಗೆ ಸಮರ್ಥನೆ ಏನಿದೆಯೋ ಅದನ್ನು ಸದನದ ಮುಂದಿಡುವುದು ಸರಿ ಅದನ್ನು ಬಿಟ್ಟು ವಿಷಯಗಳನ್ನು ಸಮಗ್ರವಾಗಿ ಹೇಳುವುದಕ್ಕೆ ಹೊರಟರೆ ಇದು ಚರ್ಚೆ ರೂಪವನ್ನು ತಾಳುತ್ತದೆ ಎನ್ನುವ ಇಂಗಿತ ಬರುವ ರೀತಿಯಲ್ಲಿ ಇದು ಆಗುತ್ತದೆ. ಆದರೂ ಕೂಡ ಅವರು ಎಲ್ಲಾ ವಿಷಯಗಳನ್ನು ಇಲ್ಲಿ ಚರ್ಚೆ ಮಾಡತಕ್ಕ ಪ್ರಯತ್ನವನ್ನು ನಡೆಸಿದ್ದಾರೆ. ತಮ್ಮನ್ನು ಮನ ಒಲಿಸಿ ಇದು ನಿಲುವಳಿ ಸೂಚನೆಯಾಗಬಲ್ಲುದು ಎನ್ನುವುದನ್ನು ತಿಳಿಸುವ ನೆಪದಲ್ಲಿ ಅವರು ಲಂಬಿಸಿ ಭಾಷಣವನ್ನು ಮಾಡುವುದಕ್ಕೆ ಹೋದರೆ ತಪ್ಪಾಗುತ್ತದೆ. ಅವರು ಮಾಡತಕ್ಕೆ ಆಪಾದನೆಗಳು ಎಷ್ಟರ ಮಟ್ಟಿಗೆ ಸತ್ಯ, ಅನತ್ಯ ಎನ್ನುವುದರ ಬಗ್ಗೆ ನಾವೂ ಸಹ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಬೇಕಾಗುತ್ತದೆ. ಇದು ಚರ್ಚೆಯ ರೂಪವನ್ನು ತಳೆದಿರತಕ್ಕದ್ದು ಸರಿಯಲ್ಲ. ತಾವೂ ಸಹ ಇದಕ್ಕೆ ಸೂಚನೆಯನ್ನು ಕೊಟ್ಟಿದ್ದೀರಿ, ಆದರೂ ಕೂಡ ಅವರು ಅದನ್ನು ಉಲ್ಲಂಘನೆ ಮಾಡಿ ನಡೆದು ಕೊಳ್ಳುತ್ತಿರುವುದು ಬಹಳ ವಿಷಾದದ ಸಂಗತಿ.

ಅಧ್ಯಕ್ಷರು —ಮಾನ್ಯ ಕೃಷ್ಣಪ್ಪನವರ ವಿಚಾರವನ್ನು ನಾನೂ ಅನುಮೋದಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಜೈಲಿನಲ್ಲಿದ್ದಾಗ ಮಾನ್ಯ ಕೃಷ್ಣಪ್ಪನವರು ನನ್ನ ಸ್ಥಾನದಲ್ಲಿ ಕುಳಿತುಕೊಂಡು ಇಂಥ ಕ್ರಿಯಾಲೋಪಗಳನ್ನು ಎತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ನಮ್ಮನ್ನು ಬಿಟ್ಟು ಹೋಗಿ ಈಗ ಕ್ರಮ ಲೋಪ ಎತ್ತಿದ್ದಾರೆ, ಇದು ಯಾವ ಧರ್ಮ ?

ಶ್ರೀ ಎಚ್. ಡಿ ದೇವೇಗೌಡ.—ನಾನು ಇಲ್ಲಿಲ್ಲದಾಗ ಇಂಥ ನಿಲುವಳಿ ನೂಚನೆಗಳನ್ನು ಎತ್ತಿ ಸಭೆಯಲ್ಲಿ ಮಂಡಿಸಿ ಜೊಕ್ಕವಾಗಿ ಕರ್ತವ್ಯವನ್ನು ಮಾಡಿದ್ದಾರೆ ಈಗ ಮಾನ್ಯ ದೇವರಾಜ ಅರಸರ ಅನುಯಾಯಿಗಳಾಗಿ ಕೆಲಸ ಮಾಡುತ್ತಿದ್ದಾರೆ ಅದಕ್ಕೆ ನಾನು ಅವರಿಗೆ ಕಾಂಪ್ಲಿಮೆಂಟ್ ಮಾಡುತ್ತಿದ್ದೇನೆ. ಈಗ ಅಲ್ಲಿಗೆ ಹೋದಾಗ ಜೊಕ್ಕವಾಗಿ ಹೇಗೆ ಕೆಲಸ ಮಾಡಬೇಕೋ ಹಾಗೆ ಮಾಡುತ್ತಿದ್ದಾರೆ.

ಶ್ರೀ ಕೆ. ಬಿ. ಶಿವಯ್ಯ —ಅಲ್ಲರುವವರೂ ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಮಾನ್ಯ ದೇವೇಗೌಡರು ಅಡಿದಂಥ ಮಾತಿಗೆ ನನ್ನ ಆಕ್ಷೇಪಣೆ ಇದೆ.

ಅಧ್ಯಕ್ಷರು.—ಈಗ ಇದರಲ್ಲೇ ಕಾಲ ಕಳೆಯುವುದು ಬೇಡ, ಇಪ್ಪೊತ್ತು ಎಷ್ಟು ವೇಳೆಯಾದರೂ ಈ ಡಿಮ್ಯಾಂಡ್ ಮುಗಿಯಬೇಕು, ಆದ್ದರಿಂದ ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಕೇಳೋಣ.

ಶ್ರೀ ಟಿ. ಆರ್. ಶಾಮಣ್ಣ.— ಅಧ್ಯಕ್ಷರೇ, ನಾನು ಇದರ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೆ.

ಅಧ್ಯಕ್ಷರು — ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು.

ಶ್ರೀ ಹೆಚ್. ಡಿ. ದೇವೆಗೌಡ.—ಇಪ್ಪೊತ್ತು ಜನತಾ ಪಕ್ಷಕ್ಕೆ ಯಾರು ಬಂದು ಸೇರಿದರು ಅವರು ಮಂತ್ರಿ ಕೆಲಸದ ಆಸೆಯಿಂದ ಬಂದಿಲ್ಲ. I take very strong objection. They came to save democracy in the country and joined Janatha Party which took birth about two months back.

3-30 P. M.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು.

ಶ್ರೀ ಹೆಚ್. ಎಂ ಚನ್ನಬಸಪ್ಪ.—ಅಧ್ಯಕ್ಷರೇ, ಒಂದು ಸಂತೋಷದ ಸಂಗತಿ ಎಂದರೆ, ನಮ್ಮ ಲೀಡರ್ ಆಫ್ ದಿ ಅಪೋಸಿಷನ್ ಅವರ ಆದೇಶ ಮುಗಿದು ಈಗ ಸ್ವಲ್ಪ ನ್ಯಾಯ ಮತ್ತು ನೀತಿ ಕಡೆ ಗಮನ ಹರಿಯುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು ಮಂತ್ರಿ ಸ್ಥಾನವನ್ನು ಬಿಟ್ಟು, ಈ ರಾಜ್ಯದಲ್ಲಿ ಸಂಸ್ಕೃತಿ ಇರಬೇಕೆ ಮಾಡಿ, ಅದಕ್ಕೆ ತಾವು ಮುಖ್ಯಸ್ಥರಾಗಿ ನೀತಿ ಭೋಧೆ ಮಾಡಿದರೆ ಚೆನ್ನಾಗಿ ಇರುತ್ತದೆ.

† ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅಧ್ಯಕ್ಷರೇ, 5ನೇ ಜೂನ್ 1977 ರಂದು ಚಿಂತಾಮಣಿಯಲ್ಲಿ ಎರಡು ಗುಂಪುಗಳ ಜನಗಳಿಗೆ ಘರ್ಷಣೆಯಾಗಿರುವುದು ಸತ್ಯ. ಅದರಲ್ಲಿ ಕಾಂಗ್ರೆಸ್ ಪಕ್ಷದ ನಾರಾಯಣಪ್ಪ ಎನ್ನುವವರಿಗೂ, ಜನತಾ ಪಕ್ಷದ ಶ್ರೀನಿವಾಸ ಎನ್ನುವವರಿಗೂ ಯಾವುದೋ ಕಾರಣಗಳಿಂದ ವ್ಯಾಜ್ಯ ಶುರುವಾಯಿತು. ನನಗೆ ಬಂದಿರುವ ವರದಿ ಪ್ರಕಾರ, ಅದು ಸಣ್ಣದಾಗಿರಲಿ ಅಥವಾ ದೊಡ್ಡದಾಗಿರಲಿ ವ್ಯಾಜ್ಯ ಪ್ರಾರಂಭವಾದಮೇಲೆ, ಆ ಕಡೆ ಸ್ವಲ್ಪ ಜನರು ಸೇರಿ ಗುಂಪಾಗಿ ಹೊಡೆದಾಟ ಬಡಿದಾಟವಾಗಿ 12 ಕೇಸುಗಳು ರಿಜಿಸ್ಟರ್ ಆಗಿವೆ ಇದರಲ್ಲಿ ಕ್ರಿಮಿನಲ್ 72 ಕ್ರಿಮು 72-77 ರಿಜಿಸ್ಟರ್ ಮಾಡಿದ್ದಾರೆ. ಅದು ಚೌಡರೆಡ್ಡಿ ಎಂ. ಎಲ್. ಎ. ಮತ್ತು 23 ಜನರ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ತಕ್ಷಣದಲ್ಲೇ ಗಲಾಟೆಯನ್ನು ಹತೋಟಿಗೆ

ತರುವುದಕ್ಕಾಗಿ ಕೋಲಾರದಿಂದ ಹೆಚ್ಚು ಜನ ಪೋಲೀಸರನ್ನು ಕರೆತಂದು ಅಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಾರೆ. ಇದರಲ್ಲಿ 15 ಜನ ಕಾಂಗ್ರೆಸ್ಸಿನವರನ್ನು 18 ಜನ ಜನತಾ ಪಕ್ಷದವರನ್ನು ಅರೆಸ್ಟ್ ಮಾಡಲಾಗಿದೆ. ದಿನಾಂಕ 7ನೇ ಜೂನ್ 1977 ರಲ್ಲಿ 15 ಜನರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇನ್ನುಳಿದ 18 ಜನರನ್ನು 8ನೇ ಜೂನ್ 1977 ರಲ್ಲಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಏಟು ತಿಂದಿರುವವರು ಯಾವುದೋ ಒಂದು ಗಂಪಿನವರಾಗಲಿ, ಅಥವಾ ಒಂದು ಪಕ್ಷದವರಾಗಲಿ ಅಲ್ಲ. 6 ಜನ ಕಾಂಗ್ರೆಸ್ಸಿನವರಿಗೆ, 7 ಜನ ಜನತಾ ಪಕ್ಷದವರಿಗೆ ಏಟು ಬಿದ್ದಿದೆ. ಇವಲ್ಲದೇ ಪೋಲೀಸ್ ವರಿಗೂ ಸಹ ಇಬ್ಬರಿಗೆ ಏಟು ಬಿದ್ದಿದೆ. ಆದುದರಿಂದ ಈ ಒಂದು ಘಟನೆಯಲ್ಲಿ ಯಾರ ಕೈ ಮೇಲು, ಯಾರ ಕೈ ಕಡಿಮೆ ಎಂದು ನಾವು ಇಲ್ಲಿ ಕುಳಿತು ಹೇಳುವುದು ಕಷ್ಟ, ಇದನ್ನು ನಮ್ಮ ಮಾನ್ಯ ಸದಸ್ಯರು ಕಾಲಿಂಗ್ ಅಟೆನ್‌ಷನ್ ಆಗಿ ತೆಗೆದುಕೊಂಡು ಬಂದಿದ್ದರೆ ಪ್ರತಿಯೊಂದು ವಿವರವನ್ನು ಸಭೆಯ ಮುಂದೆ ಇಡುತ್ತಿದ್ದ ಅವರು ಅದನ್ನು ಮಾಡಲಿಲ್ಲ. ಅವರು ಪ್ರಶ್ನೆ ರೂಪದಲ್ಲಿ ತಂದಿದ್ದರೂ ಕೂಡ ಅದರ ಬಗ್ಗೆ ವಿವರ ತರಿಸಿ ಇಡುತ್ತಿದ್ದೆ, ಅವರು ಅದನ್ನು ಮಾಡಲಿಲ್ಲ, ಈಗ ಈ ಘಟನೆಯನ್ನು ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ತಂದಿದ್ದಾರೆ. ಇದು ನನ್ನ ಅಲ್ಪ ಅಭಿಪ್ರಾಯದಲ್ಲಿ ಲಾ ಅಂಡ್ ಆರ್ಡರ್ ಪೊಸಿಷನ್ ಏನು ಇದೆ, ಈ ಘಟನೆಗಳು ದೇಶದಲ್ಲಿ ಅಲ್ಲಲ್ಲೇ ಆಗುತ್ತಾ ಇರುತ್ತದೆ ಇದು ದುರುದ್ದೇಶಪೂರಿತವಾಗಿ ದೊಡ್ಡ ದೊಡ್ಡ ಗುಂಪುಗಳು ಸೇರಿ ನೆಡೆದಂತ ಘಟನೆಯಲ್ಲ, ಏನೋ ಅಕಸ್ಮಿಕವಾಗಿ ಘಟನೆಗಳು ಪ್ರಾರಂಭವಾಗಿ ದೊಡ್ಡದಾಗುತ್ತಾ ಬಂದು ಅದರಲ್ಲಿ ಆ ಕೆಡೆಯವರು, ಈ ಕಡೆಯವರು, ಮತ್ತೆ ಪೋಲೀಸಿನವರು ಏಟು ತಿಂದಿದ್ದಾರೆ ಇದು ಆಡ್ಜರ್ನ್‌ಮೆಂಟ್ ಮೋಷನ್‌ಗೆ ಸರಿಯಾದುದಲ್ಲ ಎಂದು ನನ್ನ ಅಭಿಪ್ರಾಯ. ಒಂದು ವೇಳೆ ತಾವು ಅಪೇಕ್ಷಿಪಡುವುದಾದರೆ, ಇದರ ಸಕಲ ವಿವರಗಳನ್ನು ಕೂಡ ನಾಳೆ ಅಥವಾ ನಾಡಿದ್ದು ಪ್ರತಿ ವಿವರವನ್ನು ಈ ಸಭೆಯ ಮುಂದೆ ಇಡಲಕ್ಕೆ ಅಭ್ಯಂತರವಿಲ್ಲ. ಈ ಕಾರಣದ ಮೇಲೆ ಲಾ ಅಂಡ್ ಆರ್ಡರ್ ಪೊಸಿಷನ್ ಡಿಸ್ಟರ್ಬ ಮಾಡತಕ್ಕ ಘಟನೆಗಳು ಆಡ್ಜರ್ನ್‌ಮೆಂಟ್ ಮೋಷನ್‌ಗೆ ಆಗಿಬಿಟ್ಟರೆ, ಇನ್ನು ದೇಶದಲ್ಲಿ ಪ್ರತಿದಿವಸ ಅಡ್ಜರ್ನ್‌ಮೆಂಟ್ ಮೋಷನ್ ಅಪ್ಲೈ ಮಾಡುವುದಕ್ಕೆ ಬರುತ್ತದೆ.

ಇವತ್ತು ಬಳ್ಳಾರಿ, ಶಿರಗುಪ್ಪ, ಬಿಜಾಪುರಗಳಲ್ಲಿ ಹೊಡೆದಾಟ ಬಡಿದಾಟಗಳು ನಡೆಯಬಹುದು ಎಲ್ಲಕ್ಕೂ ಅಡ್ಜರ್ನ್‌ಮೆಂಟ್ ಮೋಷನ್ ತರುವುದಕ್ಕೆ ಆಗುತ್ತದೆಯೇ ? ಇದು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಯೋಗ್ಯವಾಗಿಲ್ಲದೇ ಇರುವುದರಿಂದ ಇದನ್ನು ತಳ್ಳಿಹಾಕಬೇಕೆಂದು ಹೇಳುತ್ತೇನೆ. ಆದರೆ ಈ ಸಭೆಗೆ ಮಾತ್ರ ಯಾವ ವಿಚಾರವನ್ನು ಮುರೆಮಾಚುವುದಕ್ಕೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅದು ಸರ್ಕಾರದ ಇಚ್ಛೆಯೂ ಅಲ್ಲ. ಯಾರೇ ಆಗಲೀ, ಯಾವ ಪಕ್ಷವೇ ಆಗಲೀ, ಪೋಲೀಸಿನವರೇ ಆಗಲೀ, ಯಾರ ವಿಷಯದಲ್ಲಿಯೇ ಆಗಲೀ ಪಕ್ಷಪಾತ ಮಾಡುವ ಇಚ್ಛೆ ಸರ್ಕಾರಕ್ಕೆ ಇಲ್ಲ ಮತ್ತು ಸಾರ್ವಜನಿಕ ಹಿತರಕ್ಷಣೆಯಲ್ಲಿ ಮಾನ್ಯ ದೇವೇಗೌಡರಿಗೆ ಎಷ್ಟು ಅವೇಶಪೂರಿತ ಭಾವನೆ ಇದೆಯೋ ಅದಕ್ಕಿಂತ ಹತ್ತರಷ್ಟು ಪ್ರೀತಿ ವಿಶ್ವಾಸ ನಮಗೆ ಇದೆ, ಆ ಬಗ್ಗೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಾಂಗ್ರೆಸ್‌ನವರು ಮಾತ್ರ ಸಾರ್ವಜನಿಕರೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅಧ್ಯಕ್ಷರೇ, ಅವರು ಮಾತನಾಡುವಾಗ ನಾನು ಚಕಾರ ಕೂಡ ಎತ್ತಲಿಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ನಾನು ನಿಲುವಳಿ ಸೂಚನೆ ಕಳುಹಿಸಿದ್ದು ಶುಕ್ರವಾರ, ಶನಿವಾರ ನಿಮ್ಮ ಕಛೇರಿಗೆ ಬಂದಿರಬಹುದು. ಸರ್ಕಾರಕ್ಕೆ ಎಷ್ಟು ಅಸಕ್ತಿ ಇದೆಯೆಂದು ಇದರಿಂದ ಗೊತ್ತಾಗುತ್ತದೆ. ಒಳಾಡಳಿತ ವಿಚಾರ ನಿಮಗೆ ಸಂಬಂಧಪಟ್ಟಿದ್ದಲ್ಲ. ಅದಕ್ಕೆ ಜವಾಬ್ದಾರಿಯನ್ನು ಮುಖ್ಯಮಂತ್ರಿಗಳು ಹೊತ್ತಿದ್ದಾರೆ. ಈ ವಿಚಾರ ಯಾವುದೇ ರೂಪದಲ್ಲಾಗಲೀ ಸಭೆಗೆ ಬರುತ್ತದೆ ಎನ್ನುವುದು ಗೊತ್ತಿರಲಿಲ್ಲವೇ ? ತಮ್ಮ ಕಾರ್ಯಾಲಯದಿಂದ ಸೋಮವಾರ ಹೋಗಿರಬಹುದು ತಮಗೆ 10 ನಿಮಿಷಗಳಲ್ಲಿ ಎಲ್ಲಾ ವಿಷಯಗಳನ್ನು ಸಂಗ್ರಹಣೆ ಮಾಡುವುದಕ್ಕೆ ಆಡಳಿತಯಂತ್ರ ಇದೆ ಅವಕಾಶವೂ ಇದೆ. ನಾಳೆ ಇದರ ಬಗ್ಗೆ ಬೇಕಾದರೆ ತೆಗೆದುಕೊಳ್ಳಬಹುದು. ನೀವು ಹೇಳುವುದು ಏನು ? ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದರೆ ಉತ್ತರ ಹೇಳುತ್ತಿದ್ದೆ, ಪಶ್ನೆ ರೂಪದಲ್ಲಿ ಕೇಳಿದ್ದರೆ

ಉತ್ತರ ಹೇಳುತ್ತಿದ್ದೆ ಎಂದು ಹೇಳಿದರೆ ಇದರಿಂದ ಸರ್ಕಾರಕ್ಕೆ ಗೌರವ ಬರುತ್ತದೆಯೇ ? ಇದನ್ನು ದೊಂಬಿ ಪ್ರಕರಣ ಎಂದು ಹೊಸ ತಿರುವು ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ಗಲಾಟೆಯಲ್ಲಿ ಆಸ್ತಿ ನಷ್ಟವಾಗಿದೆ, ಇದು ಎಲ್ಲರಿಗೂ ಗೊತ್ತಿದೆ. ಜನತಾ ಪಕ್ಷದವರು ಹೋಗಿ ಎಲ್ಲ ಒಡೆದು ಹಾಕಿದ್ದಾರೆ. ಇದರಲ್ಲಿ ಯಾವ ಕಾಂಗ್ರೆಸ್ ವ್ಯಕ್ತಿಗಳ ಮನೆ ನಷ್ಟವಾಗಿದೆ, ಆಸ್ತಿ ನಷ್ಟವಾಗಿದೆ, ಹೊಸ ಮನೆ ಕಟ್ಟಿದ್ದನ್ನು ಒಡೆದುಹಾಕಿದ್ದಾರೆ, ಯಾರು ತೊಂದರೆಗೆ ಗುರಿಯಾಗಿದ್ದಾರೆ ಎಂಬ ಬಗ್ಗೆ ದಯವಿಟ್ಟು ಈ ಸಭೆಗೆ ವಿವರಗಳನ್ನು ಕೊಡಬೇಕು. ಇದನ್ನು ನೀವು ದೊಂಬಿ ಪ್ರಕರಣ ಎಂದು ಹೇಳುತ್ತಿದ್ದೀರಿ, ನೀವು ದೇವರ ಮುಂದೆ ಉತ್ತರ ಹೇಳಬೇಕಾಗುತ್ತದೆ. ಪಾಪದ ಹೊರೆಯನ್ನು ಹೊತ್ತುಕೊಂಡು ಹೋಗುತ್ತೀರಿ. ಶಾಸಕತನ ಶಾಶ್ವತವಲ್ಲ- ಬಹಳ ಜನ ಈಗಾಗಲೇ ಹೋಗಿದ್ದಾರೆ. ತಮ್ಮ ಆತ್ಮಕ್ಕೆ ಹೇಳಿಕೊಳ್ಳಿ,, ಕುರ್ಚಿಗೋಸ್ಕರ ಈ ಪಾಪದ ಕೆಲಸವನ್ನು ಮಾಡಿ ಹೊರೆಯನ್ನು ಹೊತ್ತುಕೊಳ್ಳಬೇಡಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ,—ದೇವೇಗೌಡರಿಗೆ ಹೇಳಬಲ್ಲೆ ನಿಮಗೆ ಇರತಕ್ಕ ಆತ್ಮಕ್ಕಿಂತ ಕರ್ತವ್ಯವಾಕ್ಕಾದ ಆತ್ಮ ನನಗೆ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಕಲ್ಲಿನಂತಹ ಆತ್ಮ ಅದು. ಬಹಳ ವಜನ್ನಾಗಿದೆ.

ಶ್ರೀ ಹೆಚ್. ಎಂ ಚನ್ನಬಸಪ್ಪ.—ವಜನ್ ಅಂದರೆ ಪೂರ್ ಎಂದು.

SRI B. PUTTASWAMAIAH —It is really poor.

ಶ್ರೀ ಹೆಚ್. ಡಿ ದೇವೆಗೌಡ.—ಅಂದು ಚೌಡರೆಡ್ಡಿ ರೂಮಿನಲ್ಲಿ ಎಸ್.ಪಿ. ಬಂದು ಮಲಗಿದ್ದರು. At least let the Government examine this aspect. The S. P. stays with Chowda Reddy in his room I must compliment that Sub-Inspector for having registered the case knowing the relationship between the S. P. and Sri Chowda Reddy.

ಶ್ರೀ ಕಾಗೋಡು ತಿಮ್ಮಪ್ಪ.—ಎಸ್.ಪಿ. ವ್ಯಾನು ಯಾವಾಗಲೂ ಶಾಸಕರ ಭವನದ ಹತ್ತಿರ ನಿಂತಿರುತ್ತೆ ಏಕೆ ?

ಶ್ರೀ ಹೆಚ್. ಡಿ. ದೇವೆಗೌಡ — ವಿಚಾರ ಮಾಡುತ್ತಾರೆ. It is going to bring disegrace to the I.P.S. cadre.

SRI H M. CHANNABASAPPA.—I am appealing to the Hon'ble Members with all the vehemence at my command. ಇಷ್ಟು ಮಾತ್ರ ನಾನು ಭರವಸೆ ಕೊಡಬಲ್ಲೆ. ನ್ಯಾಯವನ್ನು ಪರಿಪಾಲನೆ ಮಾಡುವ ಭರವಸೆ ಇದೆ. ಇದರ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಎಷ್ಟು ಅಂಶಗಳು ಬೇಕು ಎಲ್ಲವನ್ನು ಕೂಡ ಸಭೆಯ ಮುಂದೆ ಇಡುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ ಆದರೆ ಇದು ಆಡ್ಜರ್ನಮೆಂಟ್ ಮೋಷನ್‌ಗೆ ಲಗತ್ತಾಗಿ ಇಲ್ಲ.

MADAM SPEAKER —I cannot give concent to this adjournment motion.

Budget Estimates for 1977-78
Demands for Grants

Demand No. 44 - Food and Civil Supplies and
Demand No. 47 - Forests.

SRI K H. PATIL (Minister for Food and Forests).—Madam, on the recommendation of the Governor, I beg to move the following Demands for Grants.